**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 960/2019**

ಸಿ ಡಬ್ಲ್ಯೂ -5

ಪಿ ಡಬ್ಲ್ಯೂ-4

| | | |
|---|---|---|
| **ಸಾಕ್ಷಿದಾರರ ಹೆಸರು** | : | ನಾಗರಾಜ |
| **ತಂದೆ/ಗಂಡನ ಹೆಸರು** | : | ರಾಮಪ್ಪ ಹಲವಾಗಲ |
| **ವಯಸ್ಸು** | : | 45 ವರ್ಷ |
| **ಉದ್ಯೋಗ** | : | ಇಟ್ಟಿಗೆ ಬಟ್ಟೆ ಕೆಲಸ |
| **ವಾಸ** | : | ಹರಿಹರ |

**ದಿನಾಂಕಃ- 13-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಚಾಸಾ-1 ನನ್ನ ಅಣ್ಣ. ಚಾಸಾ-4 ನನ್ನ ತಮ್ಮ. ನನಗೆ 2 ಮತ್ತು 3 ನೇ ಆರೋಪಿತರ ಪರಿಚಯವಿದೆ. ಈಗ ಸುಮಾರು 4-5 ವರ್ಷಗಳ ಹಿಂದೆ ಅರೇಮಲ್ಲಾಪುರ ಗ್ರಾಮದಲ್ಲಿರುವ ಚಳಗೇರಿಯ ರಸ್ತೆಯ ಹತ್ತಿರ ನಮ್ಮ ಜಮೀನಿನಲ್ಲಿ ಒಂದು ಮನೆ ಇದೆ. ಆ ಮನೆಯಲ್ಲಿ ಎರಡು ಕುರಿಗಳನ್ನು ಕಟ್ಟಿ ಹಾಕಲಾಗಿತ್ತು. ಆಗ ಸಂಜೆ 07.00 ಗಂಟೆಯ ಸಮಯದಲ್ಲಿ ಒಂದು ಕುರಿ ನಾವು ಕಟ್ಟಿದ್ದ ಸ್ಥಳದಲ್ಲಿದ್ದು ಇನ್ನೊಂದು ಕುರಿಯನ್ನು ಬೈಕಿನಲ್ಲಿ 3 ಜನರು ತೆಗೆದುಕೊಂಡು ಹೋಗುತ್ತಿದ್ದರು. ಆಗ ನಮ್ಮನ್ನು ನೋಡಿ ಆ ಕುರಿ ಮತ್ತು ಬೈಕನ್ನು ಬಿಟ್ಟು ಓಡಿ ಹೋದರು. ಅದರಲ್ಲಿ 1 ಮತ್ತು 3 ನೇ ಆರೋಪಿತರನ್ನು ಸ್ಥಳದಲ್ಲಿ ಊರಿನವರು ಹಿಡಿದುಕೊಂಡು ಪೋಲಿಸರಿಗೆ ಒಪ್ಪಿಸಿರುತ್ತಾರೆ. ಆ ಕುರಿ ಚಾಸಾ-1 ರವರಿಗೆ ಸೇರಿತ್ತು. ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಆ ದಿವಸ ಕುರಿಯನ್ನು ಕಳ್ಳತನ ಮಾಡಿದ ವ್ಯಕ್ತಿಗಳಾಗಿರುತ್ತಾರೆ. ನಂತರ ಆರೋಪಿತರನ್ನು ಹಿಡಿದು ದೇವಸ್ಥಾನದಲ್ಲಿ ಕೂಡಿ ಹಾಕಿ ನಂತರ ಪೋಲಿಸರಿಗೆ ಒಪ್ಪಿಸಿರುತ್ತೇವೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಸಿ.ಬಿ.ಕೆ ವಕೀಲರಿಂದಃ**

ನನಗೆ ಕುರಿ ಕಳ್ಳತನ ಆಗಿದ್ದ ದಿನಾಂಕ ಗೊತ್ತಿದೆಯಾ ಎಂದರೆ ಇಲ್ಲ ಆದರೆ 2019 ನೇ ಇಸವಿ ಆಗಿತ್ತು. ಆರೋಪಿತರು ಬೆಳಿಗ್ಗೆಯಿಂದ ನಮ್ಮ ಜಮೀನಿನ ಹತ್ತಿರ ಅಡ್ಡಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಬೈಕಿನಲ್ಲಿ ಕುರಿ ತೆಗೆದುಕೊಂಡು ಹೋಗುವುದನ್ನು ಎಷ್ಟು ದೂರದಿಂದ ನೋಡಿದ್ರಿ ಎಂದರೆ 200-300 ಮೀಟರ್ ದೂರದಲ್ಲಿ

ಸಿ ಡಬ್ಲ್ಯೂ -5

ಪಿ ಡಬ್ಲ್ಯೂ-4

ನೋಡಿರುತ್ತೇನೆ. ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಬೈಕಿನ ನಂಬರು ಏನು ಎಂದರೆ ನನಗೆ ಗೊತ್ತಿಲ್ಲ. ಕುರಿ ಬಣ್ಣ ಯಾವುದು ಇತ್ತು ಎಂದರೆ ಕಪ್ಪು ಬಣ್ಣ ಆಗಿತ್ತು ತಲೆಯ ಮೇಲೆ ಸ್ವಲ್ಪ ಬಿಳಿ ಕಲರ್ ಇತ್ತು. ಆರೋಪಿತರನ್ನು ಯಾರು ಹಿಡಿದರು ಎಂದರೆ ಊರಿನ ಜನರು ತುಂಬಾ ಇದ್ದರು. ಆ ದಿವಸ ಆರೋಪಿತರು 3 ಜನರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಆರೋಪಿತರು ಯಾವುದೇ ಕುರಿಯನ್ನು ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.